# ಕೇಪ್‌ಟೌನ್‌ನ ಸಚಾ ಈಗ ಭಾರತದ ಸೊಸೆ



ಕೇಪ್‌ಟೌನ್‌ನಿಂದ ಬಂದ ಸಚಾ ತನ್ನ ಪತಿ, ಮಗಳೊಂದಿಗೆ..

ಕರ್ನಾಟಕ, ಭಾರತ ಎಂದರೆ ಬಹುತೇಕ ಎಲ್ಲ ವಿದೇಶೀಯರ ಅಭಿಪ್ರಾಯವೂ ಒಂದೇ. ಕರ್ನಾಟಕ ಸುಂದರ ರಾಜ್ಯ, ಬೆಂಗಳೂರು ಒಳ್ಳೆಯ ನಗರ. ಭಾರತದ ವಿವಿಧ ಪ್ರವಾಸಿ ತಾಣಗಳು ಆಕರ್ಷಕ, ಔದ್ಯೋಗಿಕ ದೃಷ್ಟಿಯಿಂದ, ವಾತಾವರಣದ ನಿಟ್ಟಿನಿಂದ ನೋಡಿದರೆ ಬೆಂಗಳೂರಿಗೆ ಸರಿಸಾಟಿಯಾದ ನಗರ ಬೇರೊಂದಿಲ್ಲ ಎಂಬ ಅನಿಸಿಕೆಯೇ ವಿದೇಶೀಯರಿಂದ ಬರುತ್ತದೆ. ಇದಕ್ಕೆ ಕಾರಣವೂ ಇಲ್ಲದಿಲ್ಲ. ಹೊರ ದೇಶಗಳಿಂದ ಬರುವ ವಿದೇಶೀಯರಿಗೆ ಇಲ್ಲಿ ಹಣ ಹೂಡಿಕೆಗೆ, ಉದ್ಯೋಗ ಕೈಗೊಳ್ಳುವಿಕೆಗೆ, ಉದ್ಯಮ ಆರಂಭಕ್ಕೆ, ಖಾಯಂ ಆಗಿ ನೆಲೆ ನಿಲ್ಲುವುದಕ್ಕೆ ಸದಾ 'ರೆಡ್ ಕಾರ್ಪೆಟ್' ಸ್ವಾಗತವೇ ಸಿಗುತ್ತದೆ. ಇದೇ ವಿದೇಶಗಳಿಂದ ಬಂದ ಜನ ಭಾರತವನ್ನು, ಕರ್ನಾಟಕವನ್ನು, ಬೆಂಗಳೂರು, ಮೈಸೂರು, ಮಂಗಳೂರುಗಳನ್ನು ತಮ್ಮ ವಾಸ ಸ್ಥಳವೆಂದು ಘೋಷಿಸಲು ಕಾರಣ ಎಂದರೆ ತಪ್ಪಲ್ಲ.

ದಕ್ಷಿಣ ಆಫ್ರಿಕಾದ ಕೇಪ್‌ಟೌನ್ ಮೂಲದ ಸಚಾ ಟ್ರೇಸಿ ಅರೋರ ಮೂರು ವರ್ಷಗಳ ಹಿಂದೆ ಬೆಂಗಳೂರಿಗೆ ಬಂದವರು. ಸಚಾ 2009ರಲ್ಲಿ ದೆಹಲಿಯಲ್ಲಿ ಕಂಪೆನಿಯೊಂದರಲ್ಲಿ ಕೆಲಸ ಮಾಡುವಾಗ ದೆಹಲಿ ಮೂಲದ ವರುಣ್ ಅರೋರ ಅವರ ಪರಿಚಯವಾಯಿತು. ಪರಿಚಯ ಪ್ರೇಮಕ್ಕೆ ತಿರುಗಿ ವರುಣ್ ಅವರನ್ನೇ ಮದುವೆಯಾದರು. ಸಚಾ ಈಗ ಭಾರತದ ಸೊಸೆ.

ವರುಣ್ ಲೆನೊವ ಕಂಪೆನಿಯಲ್ಲಿ ಪ್ರಾಡಕ್ಟ್ ಮ್ಯಾನೇಜರ್. ಸಚಾ ಮತ್ತು ವರುಣ್‌ಗೆ 2006ರಲ್ಲಿ ಪರಿಚಯ ಆಯ್ತು. ಅದಾಗಿ ಇಮೇಲ್‌ನಲ್ಲಿ ಸದಾ ಸಂಪರ್ಕದಲ್ಲಿದ್ದರಂತೆ. 2009ರಲ್ಲಿ ಇಬ್ಬರು ಮದುವೆಯ ನಿರ್ಧಾರ ಮಾಡಿದರು. ಈಗ ಈ ದಂಪತಿಗೆ ನಾಲ್ಕು ವರ್ಷದ ಪ್ರಿಯಾಂಕಾ ಎಂಬ ಮಗಳಿದ್ದಾಳೆ.

'ಬೆಂಗಳೂರು ನನಗೆ ಹೊಸ ಜೀವನ ನೀಡಿದೆ. ಖಾಸಗಿ ಕಂಪೆನಿಯೊಂದರಲ್ಲಿ ಮಹತ್ವದ ಜವಾಬ್ದಾರಿ ತೆಗೆದುಕೊಂಡೆ. ಅದರ ನಿಭಾವಣೆ ಮೊದಲು ಕಷ್ಟ ಎನಿಸಿದರೂ ಬರಬರುತ್ತಾ ಚೆನ್ನಾಗಿ ಹೊಂದಿಕೊಂಡೆ. ಅದೇ ವೇಳೆಗೆ ಮಗಳು ಕೂಡ ಬಂದಳು. ಹೀಗಾಗಿ ಕಚೇರಿ–ಮನೆ ಎರಡರ ಜವಾಬ್ದಾರಿ ಹೊರುವುದು ಬಹಳ ಕಷ್ಟ ಎನಿಸಿ ಕೆಲಸಕ್ಕೆ ಹೋಗುವುದು ನಿಲ್ಲಿಸಿದೆ. ಈಗ ಮಗಳೊಂದಿಗೆ ಬಹಳ ಹೊತ್ತು ಕಳೆಯುವುದರಿಂದ 'ಲೈಫ್ ರಿಲ್ಯಾಕ್ಸ್' ಎನಿಸಿದೆ' ಎನ್ನುತ್ತಾರೆ ಸಚಾ.

'ಕೇಪ್‌ಟೌನ್‌ನಲ್ಲಿ ಬದುಕು ಅದ್ಭುತ. ಅಲ್ಲಿ ತುಂಬ ಬೀಚ್‌ಗಳಿವೆ, ಕಣ್ಣು ತುಂಬಿ ಬರುವಷ್ಟು ಸುಂದರವಾದ ಪರ್ವತಗಳಿವೆ, ಹಚ್ಚಹಸುರಿನ ತೋಟಗಳಿವೆ. ಅಂಥ ಸುಂದರ ಊರು ಬಿಟ್ಟು ಇಲ್ಲಿ ಬಂದದ್ದು ಕೊಂಚ ಬೇಸರವೆನಿಸಿದರೂ ಕೌಟುಂಬಿಕ ಜೀವನ ಇಲ್ಲಿ ನೆಮ್ಮದಿ ಎನಿಸಿದೆ. ಟ್ರಾಫಿಕ್ ಕಿರಿಕಿರಿ ಇಲ್ಲಿ ಹೆಚ್ಚು. ಕೇಪ್‌ಟೌನ್‌ನಲ್ಲಿ ಸೈಕಲ್‌ನಲ್ಲೇ ಬಹಳ ದೂರದವರೆಗೂ ಹೋಗುತ್ತಿದೆ. ಆದರೆ ಅದು ಇಲ್ಲಿ ಸಾಧ್ಯವಿಲ್ಲದ ಮಾತು' ಎಂದು ಹೇಳುತ್ತಾರೆ ಇವರು.

'ನಮ್ಮ ಊರಿನಲ್ಲಿ ಮಕ್ಕಳು ಯಾವ ಭಯವೂ ಇಲ್ಲದೆ ಹೊರಗೆ ಆಟವಾಡಿ ಬರಬಹುದು. ಈಜುಕೊಳ, ಪಾರ್ಕ್‌ಗಳಲ್ಲಿ ಮಕ್ಕಳು ಮನಸೋ ಇಚ್ಛೆ ಯಾವ ಹೊತ್ತಿನಲ್ಲೂ ಹೋಗಿ ಆಟವಾಡಬಹುದು. ಆದರೆ ಇಲ್ಲಿ ಮಕ್ಕಳನ್ನು ಹೊರಗೆ ಬಿಡಲು ಭಯ. ಇದರಿಂದ ಮಕ್ಕಳು ತಮ್ಮ ಬಾಲ್ಯವನ್ನು ಸ್ವತಂತ್ರವಾಗಿ ಕಳೆಯಲು ಸಾಧ್ಯವಾಗುತ್ತಿಲ್ಲ ಎಂಬ ಕೊರಗು ನಮಗಿದೆ' ಎಂಬ ಆತಂಕ ಸಚಾ ಅವರದು.

ವಾರಾಂತ್ಯದಲ್ಲಿ ಹೋಟೆಲ್, ಪ್ರವಾಸಿ ತಾಣಗಳನ್ನು ಸುತ್ತುವುದು, ಸಿನಿಮಾ ನೋಡುವುದು, ಶಾಪಿಂಗ್ ಮಾಡುವುದು ಇತ್ಯಾದಿ. ನಂದಿಹಿಲ್ಸ್, ಮೈಸೂರು ಅಷ್ಟೇ ಏಕೆ ಅಮೃತಸರದವರೆಗೂ ಹೋಗಿ ಬಂದಿದ್ದಾರಂತೆ. ಬೆಂಗಳೂರಿನ ಲೀಲಾ ಪ್ಯಾಲೇಸ್ ಬಹಳ ಚೆನ್ನಾಗಿದೆ. ಹೋಟೆಲ್ ಮಂದಿಯೂ ಬಹಳ ಸ್ನೇಹದಿಂದ ವರ್ತಿಸುತ್ತಾರೆ. ಊಟ ತಿಂಡಿಗಳೂ ಅದ್ಭುತವಂತೆ.

'ಇಲ್ಲಿ ಬಂದ ಮೇಲೆ ಹಿಂದಿ ಮತ್ತು ಪಂಜಾಬಿ ಭಾಷೆ ಕಲಿತಿದ್ದೇನೆ. ಆದರೆ ಕನ್ನಡ ಕಲಿಯಲು ಸಾಧ್ಯವಾಗಿಲ್ಲ. ಇಂಗ್ಲಿಷ್ ಸಾರ್ವತ್ರಿಕ ಭಾಷೆ. ಹೀಗಾಗಿ ಎಲ್ಲೇ ಹೋದರೂ ಸಂವಹನ ಕಷ್ಟವಾಗದು' ಎನ್ನುತ್ತಾರೆ ಸಚಾ.

★ ಅವನೀಶ್